MAY 19, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ; 31ರ ವರೆಗೆ, ಜನ ಜಾಗೃತಿ ಪಾಕ್ಷಿಕ.**
- **ರಾಜ್ಯದ 'ಅರಿವು ಕೇಂದ್ರ'; ಬಹು ಆಯಾಮದ, ಸೃಜನಶೀಲ ಚಟುವಟಿಕೆಯ ಜ್ಞಾನಶಾಖೆ.**
- **ಅರಣ್ಯದಲ್ಲಿ ಅಕ್ರಮ ತೋಟ ನಿರ್ಮಿಸುವ, ಅನೈತಿಕ ನಡೆಗೆ, ಅರಣ್ಯ ಇಲಾಖೆ, ಕಡಿವಾಣ.**
- **ಸರ್ಕಾರಿ ಆಸ್ಪತ್ರೆ ಔ ’ಧಿ ಕೇಂದ್ರಗಳ, ಸಮರ್ಪಕ ಕಾರ್ಯನಿರ್ವಹಣೆ; ಆರೋಗ್ಯ ಇಲಾಖೆ, ಕ್ರಮ.**

<><><>

**ಈಗ ವಾರ್ತೆಗಳ ವಿವರ**

<><><>

**"ವೇಗವಾಗಿ ಬದಲಾಗುತ್ತಿರುವ ಸಮುದಾಯಗಳಲ್ಲಿ, ವಸ್ತು ಸಂಗ್ರಹಾಲಯಗಳ ಭವಿ ್ಯ" ಧ್ಯೇಯದೊಂದಿಗೆ, ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ ಹಿನ್ನೆಲೆ, ಈ ತಿಂಗಳ 31ರ ವರೆಗೆ, ಜನ ಜಾಗೃತಿ ಪಾಕ್ಷಿಕ ಆಯೋಜಿತವಾಗಿದೆ.**

<><><>

**ಪುರಾತತ್ವ ಸರ್ವೇಕ್ಷಣೆ, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಿಂದ, ಮೈಸೂರಿನಲ್ಲಿ ಆಯೋಜಿಸಿದ್ದ, 'ಮ್ಯೂಸಿಯಮ್ಸ್ ಆನ್ ವೀಲ್ಸ್' ಕಾರ್ಯಕ್ರಮಕ್ಕೆ, ಪುರಾತತ್ವ ಸರ್ವೇಕ್ಷಣಾ ಇಲಾಖೆ ಆಯುಕ್ತ ಎ.ದೇವರಾಜು ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮಾನವ ಮತ್ತು ಪ್ರಕೃತಿ ನಡುವಿನ ಸಂಕೇತವಾಗಿರುವ, ವಸ್ತು ಸಂಗ್ರಹಾಲಯದ ಮಾಹಿತಿ ತಿಳಿದುಕೊಂಡರೆ, ಇತಿಹಾಸ ತಿಳಿಯಲು ಸಾಧ್ಯ. ಹಾಗಾಗಿ ವಿವಿಧ ವಸ್ತು ಸಂಗ್ರಹಾಲಯಗಳನ್ನು ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ, ಎಂದರು. ಮೈಸೂರು, ಹಾಸನ ಹಾಗೂ ಮಂಡ್ಯ ಜಿಲ್ಲೆಯ ವಿದ್ಯಾರ್ಥಿಗಳು, ಜನತೆ ಪಾಲ್ಗೊಂಡಿದ್ದರು.**

<><><>

**ಬಳ್ಳಾರಿಯ, ರಾಬರ್ಟ್ ಬ್ರೂಸ್ ಫುಟ್, ಸಂಗನಕಲ್ಲು ಪ್ರಾಗ್ಐತಿಹಾಸಿಕ ವಸ್ತು ಸಂಗ್ರಹಾಲಯದಲ್ಲಿ, ವಿಶ್ವ ವಸ್ತು ಸಂಗ್ರಹಾಲಯ ದಿನಾಚರಣೆಯನ್ನು, ಪತ್ರಕರ್ತ ಎನ್.ವೀರಭದ್ರಗೌಡ ಉದ್ಘಾಟಿಸಿದರು.**

<><><>

ಸೃಜನಾತ್ಮಕ ಆಟಗಳೊಂದಿಗೆ, ವ್ಯಕ್ತಿತ್ವ ವಿಕಸನಕ್ಕೆ ಒತ್ತು ನೀಡುವ ಕಾರ್ಯಕ್ರಮಗಳೊಂದಿಗೆ, ಮಕ್ಕಳ ಬೇಸಿಗೆ ರಜೆಯನ್ನು ಸಂಪನ್ನಗೊಳಿಸುವ ನಿಟ್ಟಿನಲ್ಲಿ, ರಾಜ್ಯದ ಅರಿವು ಕೇಂದ್ರಗಳಲ್ಲಿ, ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ್ ಖರ್ಗೆ, ಎಕ್ಸ್ ಮಾಧ್ಯಮದಲ್ಲಿ, ಗ್ರಾಮೀಣ ಮಕ್ಕಳು, 'ಅರಿವು ಕೇಂದ್ರ'ಗಳಲ್ಲಿ, ಪುಸ್ತಕ, ನಿಯತಕಾಲಿಕೆಗಳ ಓದು, ಬರವಣಿಗೆ, ಕಥೆ ಕಟ್ಟುವಿಕೆ, ಚಿತ್ರಕಲೆ, ಪರಿಸರ ಕಾಳಜಿ, ಸ್ಥಳೀಯ ಸಂಸ್ಕೃತಿಯ ಪರಿಚಯ ಹಾಗೂ ಗ್ರಾಮೀಣ ಕ್ರೀಡೆಗಳಲ್ಲಿ, ಸಂತಸದಿಂದ ಪಾಲ್ಗೊಂಡಿದ್ದಾಗಿ, ತಿಳಿಸಿದ್ದಾರೆ. ರಾಜ್ಯದ ಅರಿವು ಕೇಂದ್ರಗಳು, ಹಲವು ಆಯಾಮಗಳ ಚಟುವಟಿಕೆಯ ಕೇಂದ್ರ ಬಿಂದುವಾಗಿವೆ. ಹಿರಿಯರು, ರೈತರು, ಮಹಿಳೆಯರು, ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆಗಳ ಅಭ್ಯರ್ಥಿಗಳು ಹಾಗೂ ಮಕ್ಕಳೂ ಪಾಲ್ಗೊಳ್ಳುತ್ತಿದ್ದಾರೆ, ಎಂದಿದ್ದಾರೆ.

<><><>

ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ, ರಾಜ್ಯ ಸಚಿವ, ಡಾಕ್ಟರ್ ಎಲ್. ಮುರುಗನ್ ಬೆಂಗಳೂರು ದೂರದರ್ಶನ ಕೇಂದ್ರಕ್ಕೆ ಭೇಟಿ ನೀಡಿ, ಹಿರಿಯ ಅಧಿಕಾರಿಗಳೊಂದಿಗೆ, ಸಮಾಲೋಚಿಸಿದರು. ದೂರದರ್ಶನ ಕೇಂದ್ರದ ಪ್ರಗತಿ ಮತ್ತು ಬದಲಾವಣೆಗಳನ್ನು ಪರಿಶೀಲಿಸಿದ ಸಚಿವರು, ಅಗತ್ಯ ಸಲಹೆ-ಸೂಚನೆ ನೀಡಿದರು. ಬಳಿಕ, ದೂರದರ್ಶನ ಕೇಂದ್ರದ ವಿವಿಧ ವಿಭಾಗಗಳಿಗೆ ಭೇಟಿ ನೀಡಿ, ಸಿಬ್ಬಂದಿಯ ಕಾರ್ಯವೈಖರಿ ಅವಲೋಕಿಸಿದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಅಭಿಲಾಷೆಯಂತೆ, 'ಏಕ್ ಪೇಢ್ ಮಾ ಕೇ ನಾಮ್' ಅಭಿಯಾನದಡಿ, ಸಚಿವ ಎಲ್. ಮುರುಗನ್ ತಮ್ಮ ತಾಯಿಯ ಹೆಸರಿನಲ್ಲಿ, ದೂರದರ್ಶನ ಕೇಂದ್ರದ ಆವರಣದಲ್ಲಿ, ಸಸಿ ನೆಟ್ಟು, ನೀರೆರೆದರು.

<><><>

ಕೇಂದ್ರ ವಾರ್ತಾ ಶಾಖೆ ಪಿ.ಐ.ಬಿ.ಯ ಅಪರ ಮಹಾನಿರ್ದೇಶಕ ಎಸ್.ಜಿ. ರವೀಂದ್ರ, ದೂರದರ್ಶನ ಕೇಂದ್ರದ ಉಪ ಮಹಾ ನಿರ್ದೇಶಕರುಗಳಾದ ಹನುಮಂತ್ ಹಾಗೂ ಭಾಗ್ಯವಾನ್, ಸೇರಿದಂತೆ ಹಿರಿಯ ಅಧಿಕಾರಿಗಳು, ಪಾಲ್ಗೊಂಡಿದ್ದರು.

<><><>

ಕರ್ನಾಟಕ ಕೇರಳ ಗಡಿ ಪ್ರದೇಶ, ಕಾಸರಗೋಡ ಜಿಲ್ಲೆ, ಮಂಜೇಶ್ವರ ತಾಲೂಕು, ಎಡನಾಡು ಗ್ರಾಮದ ಕೃಷಿಕರಾದ, ಶ್ರೀಕೃಷ್ಣ ಪ್ರಸಾದ, ತಮ್ಮ ತೋಟದಲ್ಲಿ ಬೆಳೆಯುವ, ಥರಹೇವಾರಿ ಹಣ್ಣುಗಳನ್ನು, ಸ್ವತಃ ಸ್ಥಳೀಯ ಮಾರುಕಟ್ಟೆಗೆ ಒಯ್ದು, ನೇರವಾಗಿ ಗ್ರಾಹಕರಿಗೆ ಮಾರಿ, ಶ್ರಮಕ್ಕೆ ತಕ್ಕ ಲಾಭ ಗಳಿಸುತ್ತಿದ್ದಾರೆ.

ಈ ಕುರಿತು ಒಂದು ವರದಿ..

<><><>

*ವೃತ್ತಿಯಿಂದ ಪ್ರಾಚಾರ್ಯರಾಗಿ ಹಾಗೂ ಪ್ರಸ್ತುತ ವಕೀಲರಾಗಿ ಸೇವೆ ಸಲ್ಲಿಸುತ್ತ, ತಮ್ಮ 45ನೇ ವಯಸ್ಸಿನಲ್ಲಿ ಕೃಷಿಕರಾದವರು, ಎಡನಾಡಿನ ಶ್ರೀಕೃಷ್ಣ ಪ್ರಸಾದ. ಹಲಸು, ಬಾಳೆ, ಪಪ್ಪಾಯಿ ಹಾಗೂ ಅನಾನಸ್ ಸೇರಿದಂತೆ, ತಮ್ಮ ತೋಟದಲ್ಲಿ ಹಲವಾರು ತಳಿಯ ಹಣ್ಣಿನ ಗಿಡಗಳಿಗೆ, ಅವರು ಆಶ್ರಯ ನೀಡಿದ್ದಾರೆ. ಆಯಾ ಹಣ್ಣುಗಳ ಸುಗ್ಗಿ ಕಾಲದಲ್ಲಿ, ಕೊಯ್ಲಿನ ಬಳಿಕ, ಮಧ್ಯವರ್ತಿಗಳಿಗೆ ಮಾರಾಟ ಮಾಡದೇ, ತಾವೇ ಸ್ವತಃ ತಮ್ಮ ಕಾರಿನಲ್ಲಿ, ಹಣ್ಣುಗಳನ್ನು ಹೇರಿಕೊಂಡು, ಜನನಿಬಿಡ ರಸ್ತೆ ಪಕ್ಕ ನಿಂತು, ಯೋಗ್ಯ ಬೆಲೆಗೆ ಮಾರಿ, ಸ್ವತಃ ಮಾರುಕಟ್ಟೆಯೊಂದನ್ನು ಸೃಷ್ಟಿಸಿಕೊಂಡಿದ್ದಾರೆ. ಹಲಸಿನ ಸೊಳೆ ಬಿಡಿಸಿ ಪೊಟ್ಟಣ ಕಟ್ಟಿ, ಹಲಸಿನ ಹಪ್ಪಳ, ಹಲಸಿನ ಚಿಪ್ಸ್ ಸೇರಿದಂತೆ, ಹಲವು ಮೌಲ್ಯವರ್ಧಿತ ಉತ್ಪನ್ನಗಳನ್ನು, ಸಮಯ ಸಿಕ್ಕಾಗ ಸಿದ್ಧಪಡಿಸಿ ಸಹ, ಗ್ರಾಹಕರ ಅನುಕೂಲಕ್ಕಾಗಿ ಅವರು, ಮಾರಾಟ ಮಾಡುತ್ತಾರೆ.*

<><><>

*ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನುಭವ ಹಂಚಿಕೊಂಡಿದ್ದಾರೆ, ಪ್ರಯೋಗಶೀಲ ಕೃಷಿಕ, ಮಂಜೇಶ್ವರದ ಶ್ರೀಕೃಷ್ಣ ಪ್ರಸಾದ.*

<><><>

ರವಿ ಕುಲಕರ್ಣಿ (43) + ಶ್ರೀಕೃಷ್ಣ ಪ್ರಸಾದ ಧ್ವನಿ 45 ಸೆಕೆಂದುಗಳು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲೂಕು, ಮಡಬ ಗ್ರಾಮದಲ್ಲಿ, 15 ಕೋಟಿ ರೂಪಾಯಿ ಮೌಲ್ಯದ, 27 ಎಕರೆ ಮೀಸಲು ಅರಣ್ಯ ಭೂಮಿಯ ಒತ್ತುವರಿಯನ್ನು, ಅರಣ್ಯ ಇಲಾಖೆ ತೆರವು ಗೊಳಿಸಿದೆ ಎಂದು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಅರಣ್ಯ ಸಂಪತ್ತನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ. ಬೆಲೆ ಬಾಳುವ ಮರಗಳನ್ನು ಕಡಿದು, ಅರಣ್ಯ ಭೂಮಿಯಲ್ಲಿ ಅಕ್ರಮ ತೋಟಗಳನ್ನು ನಿರ್ಮಿಸುವ ಅನೈತಿಕ ನಡೆಗೆ, ಕಡಿವಾಣ ಹಾಕಲಾಗುತ್ತಿದೆ ಎಂದು ಎಕ್ಸ್ ಮಾಧ್ಯಮದಲ್ಲಿ, ತಿಳಿಸಿದ್ದಾರೆ. ಒತ್ತುವರಿ ತೆರವು ಗೊಳಿಸಿದ ಸ್ಥಳದಲ್ಲಿ, ಹಲವು ಪ್ರಬೇಧದ ಸಸಿಗಳನ್ನು ನೆಟ್ಟು, ಫಲಕವನ್ನೂ ಅಳವಡಿಸಲಾಗಿದೆ ಎಂದು, ಮಾಹಿತಿ ನೀಡಿದ್ದಾರೆ.

<><><>

ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿಯೇ, ರೋಗಿಗಳಿಗೆ ಉಚಿತವಾಗಿ ಔ ’ಧಿಗಳು ಸಮರ್ಪಕವಾಗಿ ದೊರೆಯಬೇಕು; ಈ ನಿಟ್ಟಿನಲ್ಲಿ ಸರ್ಕಾರಿ ಆಸ್ಪತ್ರೆಗಳ ಔ ’ಧಿ ಕೇಂದ್ರಗಳು, ಸಕ್ರಿಯವಾಗಿ ಕಾರ್ಯನಿರ್ವಹಿಸುವಂತೆ, ಕ್ರಮ ಕೈಗೊಳ್ಳಲಾಗಿದೆ ಎಂದು, ಆರೋಗ್ಯ ಖಾತೆ ಸಚಿವ, ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ, ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ, ಜನೌ ’ಧಿ ಕೇಂದ್ರಗಳನ್ನು ತೆರೆಯಲು ಸಲ್ಲಿಕೆಯಾಗಿದ್ದ, 31 ಪ್ರಸ್ತಾವಗಳನ್ನು ತಿರಸ್ಕರಿಸಲಾಗಿದೆ. ವೈದ್ಯರು ಹೊರಗಡೆಯಿಂದ ಔಷಧಿ ತರುವಂತೆ, ಚೀಟಿ ಬರೆಯುವಂತಿಲ್ಲ, ಎಂದರು.

<><><>

ಸೃಜನಶೀಲ ಛಾಯಾಚಿತ್ರಕಾರ, ಧಾರವಾಡದ ಶಶಿ ಸಾಲಿ ಅವರಿಗೆ, ಅಭಿನಂದನೆ ಹಾಗೂ ‘ನೆನಪು ಹರಿಗೋಲು’ ಗ್ರಂಥಾವಲೋಕನ ಕಾರ್ಯಕ್ರಮ, ಇಂದು ಸಂಜೆ 4 ಗಂಟೆಗೆ, ಧಾರವಾಡದ ಆಲೂರ ವೆಂಕಟರಾವ ಸಭಾಭವನದಲ್ಲಿ ಜರುಗಲಿದೆ. ಗದಗ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ, ತೋಂಟದ ಸಿದ್ಧರಾಮ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ, ಸಿ.ಸೋಮಶೇಖರ, ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಾಹಿತಿ ಸಿದ್ಧಲಿಂಗ ಪಟ್ಟಣಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದು, ವಿನಯಾ ವಕ್ಕುಂದ ‘ನೆನಪು ಹರಿಗೋಲು’ ಗ್ರಂಥವನ್ನು, ಅವಲೋಕಿಸಲಿದ್ದಾರೆ.

<><><>

ಪ್ರದೇಶ ಸಮಾಚಾರಕ್ಕಾಗಿ ಖ್ಯಾತ ಛಾಯಾಚಿತ್ರಕಾರ ಶಶಿ ಸಾಲಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಶಶಿ ಸಾಲಿ ಧ್ವನಿ 45 ಸೆಕೆಂದುಗಳು

<><><>

ನಿವೃತ್ತ ನ್ಯಾಯಮೂರ್ತಿ ಎಸ್.ಆರ್. ನಾಯಕ್ ಬೆಂಗಳೂರಿನಲ್ಲಿ ನಿನ್ನೆ ನಿಧನರಾದರು. ಅವರಿಗೆ 80 ವರ್ಷ ವಯಸ್ಸಾಗಿತ್ತು. ಮೂಲತಃ ಉತ್ತರಕನ್ನಡ ಜಿಲ್ಲೆ, ಕುಮಟಾ ತಾಲೂಕು ನಾಡಮ್ಯಾಸಕೇರಿ ಗ್ರಾಮದಲ್ಲಿ, ಕೃಷಿಕ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿ ಜನಿಸಿದ, ಎಸ್.ಆರ್. ನಾಯಕ್ ಅವರು, ರಾಜ್ಯ ಮಾನವ ಹಕ್ಕು ಆಯೋಗ ಹಾಗೂ ಕಾನೂನು ಆಯೋಗದ ಅಧ್ಯಕ್ಷರಾಗಿ, ರಾಜ್ಯ ಹೈಕೋರ್ಟ್ ಹಂಗಾಮಿ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದಾರೆ. ನಾಡೋಜ ಪದವಿಗೂ ಭಾಜನರಾಗಿದ್ದ, ನಾಯಕ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ಇಂದು ಸಂಜೆ 4 ಗಂಟೆಗೆ, ಹೆಬ್ಬಾಳದ ಚಿತಾಗಾರದಲ್ಲಿ ನೆರವೇರಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ, ಅನೇಕ ಗಣ್ಯರು ಕಂಬನಿ ಮಿಡಿದಿದ್ದಾರೆ.

<><><>

ಕರ್ನಾಟಕ ಕಡಲ ಮೀನುಗಾರಿಕೆ ನಿಯಂತ್ರಣ ಕಾಯ್ದೆ ಅನ್ವಯ, ಜೂನ್ 1 ರಿಂದ ಜುಲೈ 31ರ ವರೆಗೆ, 61 ದಿನಗಳ ಕಾಲ, ಮೀನು ಪ್ರಜನನ ಕಾಲದ ಹಿನ್ನೆಲೆ, ಯಾಂತ್ರೀಕೃತ ದೋಣಿಗಳನ್ನು ಬಳಸಿ, ಮೀನುಗಾರಿಕೆ ನಿ ೇಧಿಸಲಾಗಿದೆ. ಮೀನುಗಾರಿಕೆ ನಿ ೇಧಿತ ಅವಧಿಯಲ್ಲಿ, ಉತ್ತರಕನ್ನಡ ಜಿಲ್ಲೆಯಾದ್ಯಂತ, ಕೇವಲ 10 ಅಶ್ವಶಕ್ತಿ ಸಾಮರ್ಥ್ಯದ ಮೋಟಾರ್ ದೋಣಿ, ಸಾಂಪ್ರದಾಯಿಕ ಹಾಗೂ ನಾಡದೋಣಿಗಳ ಮೂಲಕ, ಮೀನುಗಾರಿಕೆ ಕೈಗೊಳ್ಳಲು ಅಡ್ಡಿ ಇಲ್ಲ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮಾಜಿ ಪ್ರಧಾನಮಂತ್ರಿ ಎಚ್.ಡಿ. ದೇವೇಗೌಡ ಅವರಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, 93ನೇ ಹುಟ್ಟುಹಬ್ಬದ ಶುಭಾಶಯ ಕೋರಿದ್ದಾರೆ.

<><><>

ಹಿರಿಯ ಪತ್ರಕರ್ತ, ಸರಜೂ ಕಾಟ್ಕರ್ ಅವರ, 'ಛತ್ರಪತಿ ಶಿವಾಜಿ, ದಿ ಗ್ರೇಟ್ ಮರಾಠಾ' ಎಂಬ ಕೃತಿಯನ್ನು, ಲೋಕೋಪಯೋಗಿ ಖಾತೆ ಸಚಿವ ಸತೀಶ್ ಜಾರಕಿಹೊಳಿ, ಬೆಳಗಾವಿಯ ಕನ್ನಡ ಭವನದಲ್ಲಿ, ಬಿಡುಗಡೆ ಮಾಡಿದರು.

<><><>

ಮಡಿಕೇರಿಯ ಫೀಲ್ಡ್ ಮಾ ೯ಲ್ ಕಾರ್ಯಪ್ಪ ಕಾಲೇಜಿನಲ್ಲಿ, ಬೆಂಗಳೂರಿನ ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ವತಿಯಿಂದ, "ಮುತ್ತು ಬಂದಿದೆ ಕೇರಿಗೆ" ಎಂಬ ರಸ ಗ್ರಹಣ ಶಿಬಿರ ನಡೆಯಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ; 31ರ ವರೆಗೆ, ಜನ ಜಾಗೃತಿ ಪಾಕ್ಷಿಕ.
- ರಾಜ್ಯದ 'ಅರಿವು ಕೇಂದ್ರ'; ಬಹು ಆಯಾಮದ, ಸೃಜನಶೀಲ ಚಟುವಟಿಕೆಯ ಜ್ಞಾನಶಾಖೆ.
- ಅರಣ್ಯದಲ್ಲಿ ಅಕ್ರಮ ತೋಟ ನಿರ್ಮಿಸುವ, ಅನೈತಿಕ ನಡೆಗೆ, ಅರಣ್ಯ ಇಲಾಖೆ, ಕಡಿವಾಣ.
- ಸರ್ಕಾರಿ ಆಸ್ಪತ್ರೆ ಔ ಧಿ ಕೇಂದ್ರಗಳ, ಸಮರ್ಪಕ ಕಾರ್ಯನಿರ್ವಹಣೆ; ಆರೋಗ್ಯ ಇಲಾಖೆ, ಕ್ರಮ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>